(b) whether any provision has been made for drinking water to these people by sinking bore wells there;

(c) if so, what is the daily yield of water from those bore wells;

(d) whether there is any complaint lodged by these people before the concerned authorities regarding inadequate water supply at their places ?

SRI B. BASAVALINGAPPA (Minister for Revenue)—

(a) Seventy families consisting of 420 people were affected. Out of these 60 families are at present residing in the colony at Lorettopadavu.

(b) Yes. Two bore wells have been sunk. (1) one bore well sunk bythe town Municipality and (2) another by the PHE Department.

(c) The present yield of the bore well sunk by the Municipality is not known. The yield of the other well, at the time of fixing thadpump, was 3,000 G.P.H. At present the well is not yielding any waer as it has silted up.

(d) Yes.

ಶ್ರೀ ಬಿ.ಎ. ಮೊಹಿದ್ದೀನ್—ತಮ್ಮ ಉತ್ತರದಲ್ಲಿ ಲೊರಟ್ಟೊ ಪಾಡವುನ್ ಜನತೆ ಸಾಕಷ್ಟು ನೀರು ದೊರೆಯುತ್ತಿಲ್ಲವೆಂಬ ಬಗ್ಗೆ ದೂರನ್ನು ಕೊಟ್ಟಿದ್ದಾರೆಂದು ಹೇಳಿದ್ದೀರಿ. ಹಾಗಾದರೆ ಆ ಬಗ್ಗೆ ಏನು ಕ್ರಮ ಕೈಗೊಂಡಿರಿ?

† ಶ್ರೀ ಬಿ. ಬಸವಲಿಂಗಪ್ಪ—ಅಲ್ಲಿನ ಬೋರ್‌ವೆಲ್ ಸ್ವಲ್ಪ ಕೆಟ್ಟಿದೆ, ಅದನ್ನು ರಿಪೇರಿ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ.

ಶ್ರೀ ಬಿ.ಎ. ಮೊಹಿದ್ದೀನ್—ಆದರೂ ಸಹ ನನಗೆ ಬಂದ ಮಾಹಿತಿ ಪ್ರಕಾರ ಇದುವರೆಗೂ ಅಲ್ಲಿ ಯಾರೂ ಹೋಗಿಲ್ಲ, ರಿಪೇರಿ ಮಾಡಿಲ್ಲ. ಈಗಾಗಲೇ ಅಲ್ಲಿಯ ಜನರು ವಲಸೆ ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಬಸವಲಿಂಗಪ್ಪ—ರಿಪೇರಿ ಮಾಡಿಲ್ಲವೆಂಬುದು ನಿಜ, ಆದರೆ ರಿಪೇರಿ ಮಾಡಲಿಕ್ಕೆ ಆದೇಶ ಕೊಟ್ಟಿದ್ದೇವೆ; ಪುನಃ ತಿಳುವಳಿಕೆ ಕೊಡುತ್ತೇವೆ.

ಅಧ್ಯಕ್ಷರು—ಶ್ರೀ ಎಂ ವೈ. ಪಾಟೀಲ್ ಅವರ ಪ್ರಶ್ನೆ ನಂ. ೪೭೭ ಶ್ರೀ ಜಿ.ಪಿ. ಒಡೆಯರಾಜ್‌ರವರು ಕೇಳಬಹುದು.

Practical defficulties in Executing the Land Acquisition Act

477 SRI GOVIND P. WADAYARAJ (Kamalapur) — on behalf of SRI M.Y. PATIL (Afzalpura)—Will the Minister for Revenue be pleased to state :

(a) whether there have been any practical difficuities encountered by Government in executing the existing 1885 Land Acquisition Act,

(b) whether the Government has felt any time that the 1885 Lnad Acquisition Act is complex and complicated;

(c) if so, whether the Government has thought of simplifying it for speedy execution;

(d) when the Government propose to simplify it ?

SRI B. BASAVALINGAPPA (Minister for Revenue),—

(a) No.

(b) No.

(c) The Government have been thinking of enacting a new Law for the State in the light of the experience of the past.

(d) Nil.

ಶ್ರೀ ಗೋವಿಂದ ಪಿ. ಒಡೆಯರಾಜ್—ಭೂ ಸ್ವಾಧೀನ ಶಾಸನವನ್ನು ಜಾರಿಗೊಳಿಸಲು ತೊಂದರೆಗಳಿವೆ ಎಂಬುದನ್ನು ಒಪ್ಪಿಕೊಂಡು ಸರ್ಕಾರದವರು ಹೊಸದಾಗಿ ಕಾನೂನನ್ನು ಮಾಡಬೇಕೆಂದು ಯೋಚಿಸಿದ್ದಾರೆಂದು ಉತ್ತರಿಸಿದ್ದೀರಿ. ಇದು ಮಹತ್ತರವಾದ ಕಾನೂನಾದ್ದರಿಂದ ಎಷ್ಟು ಬೇಗ ಈ ಕಾನೂನನ್ನು ಮಾಡುತ್ತೀರಿ?

† ಶ್ರೀ ಬಿ. ಬಸವಲಿಂಗಪ್ಪ—ಇದುವರೆಗೆ. ಕೇಂದ್ರ ಸರ್ಕಾರದವರು ಮಾಡಿರತಕ್ಕ ಕಾನೂನನ್ನು ನಾವು ಅನುಸರಿಸಿಕೊಂಡು ಬಂದಿದ್ದೇವೆ. ಅದನ್ನು ಅನುಸರಿಸುವಾಗ ಕೆಲವು ನ್ಯೂನತೆಗಳು ಕಂಡು ಬಂದಿವೆ. ಈ ಭೂ ಸ್ವಾಧೀನ ಶಾಸನ ಎಂಬುದು ಕನ್‌ಕರೆಂಟ್ ಲಿಸ್ಟ್ ಆಗಿದೆ. ಆದ್ದರಿಂದ ಕೇರಳದವರನ್ನು ಬಿಟ್ಟರೆ, ಇಂಡಿಯಾ ದೇಶದ ಇನ್ನು ಯಾವ ರಾಜ್ಯದಲ್ಲಿಯೂ ಕೂಡ ಮಾಡಿಲ್ಲ. ಈಗ ನಾವು ಯೋಚಿಸುತ್ತಿದ್ದೇವೆ, ಕರ್ನಾಟಕ ರಾಜ್ಯದಲ್ಲಿ, ನಾವು ಪ್ರತ್ಯೇಕವಾದ ಭೂ ಸ್ವಾಧೀನ ಶಾಸನವನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್—ಭೂ ಸ್ವಾಧೀನ ಶಾಸನದಲ್ಲಿ ೭-೮ ಹಂತಗಳಿವೆ. ಅವುಗಳಲ್ಲಿ ಮುಖ್ಯವಾದವು ೩. ಅವು ಯಾವುವೆಂದರೆ, ಪ್ರಿಲಿಮಿನರಿ ನೋಟಿಫಿಕೇಷನ್, ಎರಡನೆಯದು ಗೆಜೆಟ್ ನೋಟಿಫಿಕೇಷನ್, ಮೂರನೆಯದು ಫೈನಲ್ ಆಗಿ ಅಕ್ವೈರ್ ಮಾಡಿ ಪೊಸಿಷನ್ ತೆಗೆದುಕೊಂಡದ್ದಕ್ಕೆ ಮಾಡತಕ್ಕ ನೋಡಿಫಿಕೇಷನ್. ಈ ಹಂತಗಳಿಂದ ಏನಾಗಿದೆ ಎಂದರೆ ಸಾಮಾನ್ಯ ಜನರಿಗೆ ಬಹಳ ತೊಂದರೆಯಾಗಿದೆ,ಸುಮಾರು ೧೦-೧೫-೨೦ ವರ್ಷಗಳಿಂದಲೂ ಲ್ಯಾಂಡ್ ಅಕ್ವಿಜಿಷನ್ ಕೇಸುಗಳು ಫೈನಲ್ ಆಗದೆ ಉಳಿದಿವೆ. ಈ ಎಲ್ಲಾ ತೊಂದರೆಗಳನ್ನು ನಿವಾರಿಸಿ ಜಾಗ್ರತೆ ಅದನ್ನು ಸರಿಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ—ಮಾನ್ಯ ಸದಸ್ಯರು ಹೇಳುವುದೆಲ್ಲ ನಿಜ. ಅದನ್ನು ಅರಿತುಕೊಂಡು ಮನೆ ನಿವೇಶನಗಳನ್ನು ಅಕ್ವೈರ್ ಮಾಡತಕ್ಕದ್ದರ ಬಗ್ಗೆ ಪ್ರತ್ಯೇಕವಾಗಿ ಕಾನೂನು ಮಾಡಿದ್ದೇವೆ. ಅದನ್ನು ಬಿಟ್ಟರೆ ಬೇರೆ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಮಾಡಿಲ್ಲ. ಅದೆಲ್ಲವನ್ನು ಅಳವಡಿಸಿಕೊಂಡು ಯಾವ ರೀತಿ ಸಾಮ್ಯವಸ್ಥಿತವಾಗಿ ಲ್ಯಾಂಡ್ ಅಕ್ವಿನೆಷನ್ ಆಕ್ಟನ್ನು ಮಾಡಬೇಕೆಂದು ಯೋಚನೆ ಮಾಡಿ ಮಾಡುತ್ತೇವೆ.

ಶ್ರೀ ಎಂ ಸಿ. ಬಸಪ್ಪ—ಲ್ಯಾಂಡ್ ಅಕ್ವಿಷನ್ ಆಕ್ಟ್‌ನಲ್ಲಿ ೨ ಇವೆ; ಸೆಂಟ್ರಲ್ ಆಕ್ಟ್ ಮತ್ತು ಸ್ಟೇಟ್ ಆಕ್ಟ್ ಎಂದು. ಜನತಾ ಯೋಜನೆಯಲ್ಲಿ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು ಸೈಟನ್ನು ಹಂಚುವುದಕ್ಕೆ ನಮ್ಮ ರಾಜ್ಯದಲ್ಲಿ ಒಂದು ಆಕ್ಟ್‌ನ್ನು ಪಾಸ್ ಮಾಡಿದ್ದೇವೆ. ಅದರ ಪ್ರಕಾರ ಪ್ರೊಸೀಡಿಂಗ್ಸ್ ಇನ್ಸಿಯೇಟ್ ಆದ ಒಂದು ತಿಂಗಳೊಳಗೆ ಸ್ವಾಧೀನಕ್ಕೆ ತೆಗೆದುಕೊಂಡು ಸೈಟ್ ಹಂಚತಕ್ಕ ಅವಕಾಶ ಇದೆ. ಅದರಲ್ಲಿ ಏತಕ್ಕೋಸ್ಕರವಾಗಿ ನಿಧಾನವಾಗುತ್ತಿದೆ ಎಂಬುದನ್ನು ವಿಚಾರ ಮಾಡಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ—ವಿಳಂಬವಾಗಬಾರದೆಂದು ಕಾನೂನು ಮಾಡಿದ್ದೇವೆ. ವಿಳಂಬ ಎಲ್ಲೆಲ್ಲಿ ಆಗಿದೆಯೋ ಗೊತ್ತಿಲ್ಲ. ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ವಿಳಂಬವಾಗಿರುವುದು ಗಮನಕ್ಕೆ ಬಂದಿದೆ. ಬೇರೆ ರೀತಿಯಲ್ಲಿ ವಿಳಂಬವಾಗಿರುವುದು ಗಮನಕ್ಕೆ ಬಂದಿಲ್ಲ. ಅಂಥ ಸನ್ನಿವೇಶಗಳು ಇದ್ದರೆ ಅವನ್ನು ಮಾನ್ಯ ಸದಸ್ಯರು ಗಮನಕ್ಕೆ ತಂದರೆ ನೋಡುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರ್‌ರವರು--ಮಾನ್ಯ ಮಂತ್ರಿಗಳು ಗಮನಕ್ಕೆ ತರಬೇಕೆಂದು ಹೇಳಿದರು. ಅಪ್ಪರ್ ಕೃಷ್ಣ ಪ್ರಾಜೆಕ್ಟಿನಲ್ಲಿ ಲ್ಯಾಂಡ್ ಆಕ್ವಿಷನ್ ಕೆಲಸ ಪ್ರಾರಂಭವಾಗಿ ೮-೯ ವರ್ಷಗಳಾದರೂ ಇಲ್ಲಿಯವರೆಗೆ ಲ್ಯಾಂಡ್ ಆಕ್ವಿಷನ್ ಕೇಸಸ್ ಫೈನಲ್ ಆಗಿಲ್ಲ, ಲಿಸ್ಟ್ ಪಬ್ಲಿಷ್ ಆಗಿಲ್ಲ. ಇದು ಸ್ಪಷ್ಟವಾದ ಉದಾಹರಣೆ. ಕೊನೇಪಕ್ಷ ಅಪ್ಪರ್ ಕೃಷ್ಣ ಮತ್ತಿತರ ಇಂಥ ಪ್ರಾಜೆಕ್ಟ್‌ಗಳಲ್ಲಿ ಆದರೂ ಲ್ಯಾಂಡ್ ಆಕ್ವಿಷನ್‌ಕೇಸಸ್ ಅನ್ನು ತ್ವರಿತವಾಗಿ ವಿಲೇವಾರಿ ಮಾಡುವುದಕ್ಕೆ ಯಾವ ಕ್ರಮಕೈಗೊಳ್ಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ--ಅದಕ್ಕೆ ಹೇಳಿದೆ, ಕರ್ನಾಟಕದಲ್ಲಿ ಲ್ಯಾಂಡ್ ಆಕ್ವಿಷನ್ ಆಕ್ಟ್‌ನ್ನು ಹೊಸದಾಗಿ ಮಾಡಬೇಕು ಎಂದು. ಈಗ ಇರತಕ್ಕ ಕಾನೂನು ಪ್ರಕಾರ ವಿಳಂಬವಾಗುತ್ತದೆ. ಹೈಕೋರ್ಟ್ ಮತ್ತೊಂದು ಕೋರ್ಟ್‌ಗೆ ಹೋಗಿ ಸ್ಟೇ ಆರ್ಡರ್ ತಂದು ಪ್ರೊಸೀಡಿಂಗ್ ಸ್ಥಗಿತಗೊಳಿಸುತ್ತಾರೆ. ಆದ್ದರಿಂದ ಎಲ್ಲವನ್ನು ಅಳವಡಿಸಿಕೊಂಡು ತಪ್ಪುನ್ನೆಲ್ಲ ಕೇಳಿ ಹೊಸದಾಗಿ ಒಂದು ಆಕ್ಟ್‌ನ್ನು ಮಾಡುತ್ತೇವೆ.

ಶ್ರೀ ಎ.ಬಿ. ಪಾಟೀಲ್--ಗುಲ್ಬರ್ಗ ಜಿಲ್ಲೆಯ ಪ್ರಾಜೆಕ್ಟ್ ಏರಿಯಾದಲ್ಲಿ ಸಾಕಷ್ಟು ಜಮೀನು ಹೋಗಿದೆ; ಆದರೆ ಇದುವರೆಗೆ ಯಾವ ಕಾಂಪನ್‌ಸೇಷನ್ ಕೊಟ್ಟಿಲ್ಲ. ಜಮೀನನ್ನು ಕಳೆದುಕೊಂಡವರಿಗೆ ಜಮೀನು ಕೂಡ ಕೊಟ್ಟಿಲ್ಲ. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ. ಬಸವಲಿಂಗಪ್ಪ--ಆ ವಿಚಾರವನ್ನು ಈಗ ತಾನೇ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ; ಇದುವರೆಗೆ ಆ ವಿಚಾರ ನನಗೆ ಗೊತ್ತಿರಲಿಲ್ಲ. ಆದರ ಬಗ್ಗೆ ತನಿಖೆ ನಡೆಸಿ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು--ಈಗ ತಡೆಹಿಡಿಯಲಾದ ಪ್ರಶ್ನೆ ನಂ. ೫೯೩ ತೆಗೆದುಕೊಳ್ಳಬಹುದು.

Delay in completion of Bridge across Kabini River near Nanjangud

593 SRI M.C. BASAPPA (Chamarajanagar) – Will the Minister for Public Works be pleased to state:—

(a) when did the work of the bridge across Kabini river near Nanjangud was entrusted to the Contractor;

(b) the time stipulated for completion of the said bridge;

(c) the reasons for not completing it in time.

(d) when is it likely to be completed ?

SRI S. BANGARAPPA (Minister for Public Works).—

(a) The bridge work across Kabini river was originally entrusted to M/s Boraiah, Basavaiah and Sons during February 1973 and subsequently the balance work has been entrusted to M/s Karnataka State Construction Corporation Limited during May 1976.

(b) The work was stipulated to be completed by the first agency in 2 years from February 1973.

(c) The first agency backed out and balance work has been delayed by the second agency i.e. Karnataka State Construction Corporation Limited.

(d) The bridge work is expected to be completed by October 1980.